2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **145/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಬಾಬು | ಪಿಡಬ್ಲೂ-11 |
| ತಂದೆಯ ಹೆಸರು | - | ಲಕ್ಷ್ಮಣ | ಸಿಡಬ್ಲೂ - 14 |
| ವಯಸ್ಸು | - | 46 ವರ್ಷ | |
| ಉದ್ಯೋಗ | - | ಪೌರ ಕಾರ್ಮಿಕ, ನಗರಸಭೆ, ಚಿಕ್ಕಮಗಳೂರು | |
| ವಾಸ ಸ್ಥಳ | - | ಶಂಕರಪುರ | |

ದಿನಾಂಕಃ 05.09.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತಿಲ್ಲ, ನಾನು ಆತನನ್ನು ನೋಡಿಲ್ಲ. ಚಾಸಾ.3 ಮತ್ತು ಚಾಸಾ.6 ರವರು ಗೊತ್ತಿಲ್ಲ. ಚಾಸಾ.15 ಗೊತ್ತು. ಚಾಸಾ.13 ತಹಶೀಲ್ದಾರ್ ರವರು ಗೊತ್ತು. ಮೃತ ಮಗು ಅಮಿಷಾಳ ಶವವನ್ನು ನೋಡಿದ್ದೇನೆ.

2. ನಾನು ಚಿಕ್ಕಮಗಳೂರಿನ ನಗರಸಭೆಯಲ್ಲಿ ಗುತ್ತಿಗೆ ಆಧಾರದ ಮೇರೆಗೆ ಚರಂಡಿ ಸ್ವಚ್ಛ ಮಾಡುವ, ಅನಾಥ ಶವವನ್ನು ಆಸ್ಪತ್ರೆಗೆ ಸಾಗಿಸುವ ಮತ್ತು ದಫನ್ ಮಾಡುವ ಕೆಲಸವನ್ನು ಈಗ್ಗೆ 15 ವರ್ಷಗಳಿಂದ ಮಾಡುತ್ತಿದ್ದೇನೆ.

3. ಈಗ್ಗೆ 2 ವರ್ಷಗಳ ಹಿಂದೆ ಚಿಕ್ಕಮಗಳೂರಿನಲ್ಲಿರುವ ರಾಮನಹಳ್ಳಿಯಲ್ಲಿರುವ ಮುಸ್ಲಿಂ ಸಮುದಾಯಕ್ಕೆ ಸೇರಿದ

ಸ್ಮಶಾನಕ್ಕೆ ನಮ್ಮ ಕಚೇರಿಯಿಂದ ಪೊಲೀಸರು ಹೇಳಿದ ಮೇರೆಗೆ ನಾನು ಮತ್ತು ಚಾಸಾ.15 ರವರು ಹೋಗಿದ್ದೆವು. ಅಲ್ಲಿಗೆ ಚಾಸಾ.13 ತಹಶೀಲ್ದಾರ್ ರವರು ಬಂದಿದ್ದರು. ಅಲ್ಲಿ ಪೊಲೀಸರು ಅಮಿಷಾ ಎಂಬ ಸಣ್ಣ ಮಗುವಿನ ಶವವನ್ನು ಊಳಲಾಗಿದೆ ಅದನ್ನು ಪೋಸ್ಟ್ ಮಾರ್ಟೆಮ್ ಮಾಡುವ ಸಲುವಾಗಿ ಗುಂಡಿಯಿಂದ ಹೊರಗೆ ತೆಗೆದು ನಂತರ ಪುನಃ ದಫನ್ ಮಾಡಿ ಎಂದು ಪೊಲೀಸರು ಹೇಳಿದರು. ಅದರ ಮೇರೆಗೆ ನಾನು ಮತ್ತು ಚಾಸಾ.15 ರವರು ಗುಂಡಿಯನ್ನು ತೆಗೆದು ನೋಡಲಾಗಿ ಅದು ಒಂದು ಹೆಣ್ಣು ಮಗುವಿನ ಶವವನ್ನು ಬಿಳಿಯ ಬಟ್ಟೆಯಲ್ಲಿ ಸುತ್ತಲಾಗಿತ್ತು. ಸದರಿ ಶವವನ್ನು ಎಲ್ಲರ ಸಮಕ್ಷಮ ನಾವು ಮೇಲೆ ಎತ್ತಿ ಪಕ್ಕಕ್ಕೆ ಇರಿಸಿದೆವು. ಅಲ್ಲಿಗೆ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಿಂದ ಪೋಸ್ಟ್ ಮಾರ್ಟೆಮ್ ಮಾಡುವವರು ಬಂದಿದ್ದರು. ಅವರು ಮಗುವಿನ ತೊಡೆಯ ಮೂಳೆಯನ್ನು ತೆಗೆದುಕೊಂಡರು.

4. ನಾವು ಮಗುವಿನ ಶವವನ್ನು ಮೇಲೆ ಎತ್ತಿದಾಗ ಶವ ಕೊಳೆತಿರಲಿಲ್ಲ ಆದರೆ ಅದು ಊದಿಕೊಂಡಿತ್ತು. ಮೂಳೆಯನ್ನು ತೆಗೆದುಕೊಂಡ ಬಳಿಕ ಪೋಸ್ಟ್ ಮಾರ್ಟೆಮ್ ಮಾಡುವವರು ಒಲಿಗೆಯನ್ನು ಹಾಕಿ ಮಗುವಿನ ದೇಹವನ್ನು ನಮಗೆ ಕೊಟ್ಟರು. ನಂತರ ನಾವು ಶವವನ್ನು ಅದೇ ಗುಂಡಿಗೆ ಹಾಕಿ ಮುಚ್ಚಿದೆವು. ಆಗ ಚಾಸಾ.13 ರವರು ಹಾಜರಿದ್ದರು.

5. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು

ನೋಡಿದರೆ ಗುರುತಿಸುತ್ತೇನೆ.

6. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಶವವನ್ನು ಹೊರತೆಗೆದು ಪುನಃ ದಫನ್ ಮಾಡಿಸಲಾದ ಸಮಯದಲ್ಲಿ ಜರುಗಿಸಲಾಯಿತು ಎಂದು ಹೇಳಲಾದ ಪಂಚನಾಮೆಯಾಗಿದ್ದು ಅದನ್ನು ನಿಪಿ.21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಗುವಿನ ಶವವನ್ನು ಹೊರತೆಗೆದ ಸ್ಥಳದಲ್ಲಿ ಮಾಡಿದ್ದೇನೆ. ಸದರಿ ದಾಖಲೆಗೆ ಚಾಸಾ.15 ರವರು ಸಹ ಸಹಿ ಮಾಡಿದ್ದಾರೆ.

7. ಸಾಕ್ಷಿಗೆ ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿರುವ ಮೃತ ಮಗು ಅಮಿಷಾಳ ಶವದ ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ನಾವು ಶವವನ್ನು ಹೊರತೆಗೆದಾಗ ಅದು ಊದಿಕೊಂಡಿದ್ದರಿಂದ ನನಗೆ ಗುರುತಿಸಲು ಆಗುತ್ತಿಲ್ಲ ಎನ್ನುತ್ತಾರೆ. ಮಗುವಿನ ತೊಡೆಯ ಮೂಳೆಯನ್ನು ಯಾವ ಕಾರಣಕ್ಕೆ ತೆಗೆದುಕೊಳ್ಳಲಾಯಿತು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

8. ಮಗುವಿನ ತೊಡೆಯ ಮೂಳೆಯನ್ನು ಡಿ ಎನ್ ಎ ಪರೀಕ್ಷೆಗೆ ಒಳಪಡಿಸಿ ಸದರಿ ಮಗುವಿನ ನಿಜವಾದ ತಂದೆ ಯಾರೆಂದು

ತಿಳಿಯುವ ಉದ್ದೇಶದಿಂದ ಮಗುವಿನ ಶವವನ್ನು ಗುಂಡಿಯಿಂದ ಹೊರತೆಗೆದು ಅದರ ತೊಡೆಯ ಮೂಳೆಯನ್ನು ವೈಧ್ಯರ ಮುಖಾಂತರ ಸಂಗ್ರಹಿಸಿಕೊಳ್ಳಲಾಯಿತು ಎಂದರೆ ಸಾಕ್ಷಿ ಯಾವ ಕಾರಣಕ್ಕೆ ಮೂಳೆಯನ್ನು ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಪಾಟೀ ಸವಾಲು: ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.